





# ಒಡಿಶಾದ ಭುವನೇಶ್ವರದಲ್ಲಿರುವ ಲಿಂಗರಾಜ ದೇವಾಲಯ ಅದ್ಭುತ ವಾಸ್ತುಶಿಲ್ಪದ ಶೈವ ಸನ್ನಿಧಿ.

■ ಚಿತ್ರ- ಲೇಖನ: **ಅಮೃತ್ ಜೋಗಿ**

**ಕ**ರ್ನಾಟಕದ ಗಂಗ ಅರಸು ದೂರದ ಒಡಿಶಾದಲ್ಲಿ ಲಿಂಗರಾಜ ದೇವಾಲಯವೊಂದನ್ನು ನಿರ್ಮಾಣ ಮಾಡಿದ್ದಾರೆ. ಭುವನೇಶ್ವರದ ಅತ್ಯಂತ ಭವ್ಯ ಮತ್ತು ಅದ್ಭುತ ವಾಸ್ತುಶಿಲ್ಪದ ಶೈವ ದೇವಾಲಯ.

ಭುವನೇಶ್ವರ ಎನ್ನುವ ಹೆಸರು ಬಂದಿದ್ದೇ ಈ ದೇವಾಲಯದಿಂದ ಎನ್ನುತ್ತಾರೆ. ಆರಂಭದಲ್ಲಿ 7ನೇ ಶತಮಾನದಲ್ಲಿ ಸೂರ್ಯವಂಶಿ ಸಾಮ್ರಾಜ್ಯದ ಅರಸ ಯಯಾತಿ ಇದನ್ನು ನಿರ್ಮಿಸಿದ. ಜೈಪುರದ ತನ್ನ ರಾಜಧಾನಿಯನ್ನು ಭುವನೇಶ್ವರಕ್ಕೆ ಯಯಾತಿ ಸ್ಥಳಾಂತರಿಸಿದ್ದ. ಮುಂದೆ ನೃಪತಿ ಕೇಶರಿ, ಕಟಕ್ ನಗರ ನಿರ್ಮಾಣ ಮಾಡುವವರೆಗೂ ಭುವನೇಶ್ವರ ಈ ಸಾಮ್ರಾಜ್ಯದ ರಾಜಧಾನಿಯಾಗಿತ್ತು.

ಲಿಂಗರಾಜ ದೇವಾಲಯಕ್ಕೆ ಈಗಿನ ಭವ್ಯ ರೂಪ ನೀಡಿದವರು ಗಂಗ ಅರಸರು. ದೇವಾಲಯ ವೈಷ್ಣವ ಪಂಥದ ಪ್ರಭಾವಕ್ಕೂ ಒಳಗಾಗಿದೆ. ಮೂಲತಃ ಶೈವ ಲಿಂಗರಾಜ ದೇವಾಲಯದಲ್ಲಿ, ಹರಿಹರರ ರೂಪದಲ್ಲಿ ಶಿವನ ಆರಾಧನೆ ಮುಂದುವರೆದಿದೆ. ಕೀರ್ತಿವಾಸ, ಹರಿಹರೇಶ್ವರ ಮಾತ್ರವಲ್ಲದೇ ತ್ರಿಭುವನೇಶ್ವರ ಎಂಬ ಹೆಸರಿನಿಂದಲೂ ಇದನ್ನು  ಕರೆಯುತ್ತಾರೆ. ಭುವನೇಶ್ವರ  ಎನ್ನುವ ಹೆಸರು ಬಂದಿದ್ದೇ ಹೀಗಂತೆ.

ಇಲ್ಲಿನ ಬಿಂದು ಸಾಗರ ಕೆರೆಯ ಸುತ್ತ ದೇವಾಲಯ ಸಂಕೀರ್ಣವಿದೆ.  25 ಲಕ್ಷ ಅಡಿಗೂ ವಿಶಾಲವಾದ ಪ್ರಾಂಗಣವನ್ನು ಇದು ಹೊಂದಿದೆ. ರಕ್ಷಣೆಗಾಗಿ ಸುತ್ತಲೂ ಬೃಹತ್ ಗೋಡೆಗಳಿವೆ. ಪ್ರಧಾನ ಲಿಂಗ ನೆಲಮಟ್ಟದಿಂದ ಎಂಟು ಇಂಚು ಎತ್ತರ ಮತ್ತು 8 ಅಡಿ ಸುತ್ತಳತೆ ಹೊಂದಿದೆ.

ಲಿಂಗರಾಜ ದೇವಾಲಯ ವಿಮಾನ (ಕೇಂದ್ರ ಆರಾಧನಾ ಸ್ಥಳ), ಜಗಮೋಹನ (ಭಕ್ತರಿಗಾಗಿರುವ ಸ್ಥಳ), ನಟಮಂದಿರ (ಉತ್ಸವ ಸ್ಥಳ) ಮತ್ತು ಭೋಗಮಂಟಪ (ಪ್ರಸಾದ ನಿಲಯ) ಹೀಗೆ ನಾಲ್ಕು ವಿಭಾಗಗಳನ್ನು ಹೊಂದಿದೆ. ಕಳಿಂಗ ವಾಸ್ತುಶಿಲ್ಪವನ್ನು ಪ್ರಧಾನವಾಗಿ ಇಟ್ಟುಕೊಂಡಿರುವ ದೇವಾಲಯವಿದು. ಕೇಂದ್ರ ಗೋಪುರ 180 ಅಡಿ ಎತ್ತರವಿದೆ. ಒಂದು ವಿಭಾಗವೂ ಹಂತಹಂತವಾಗಿ ಏರುಮುಖವಾಗಿದೆ. ಭೋಗಮಂಟಪ ಪಿರಾಮಿಡ್ ಆಕೃತಿಯಲ್ಲಿದ್ದು ಅಂತಿಮವಾಗಿ ಸೇರ್ಪಡೆಗೊಂಡ ಭಾಗವಾಗಿದೆ. ಮಾನವ- ವನ್ಯಜೀವಿಗಳ ಸಹಜೀವನದ ಕೆತ್ತನೆಗಳು ಇಲ್ಲಿ ಗಮನ ಸೆಳೆಯುತ್ತವೆ.

ಪ್ರಸ್ತುತ ದೇವಾಲಯ ನಿರ್ವಹಣೆಗೆ ಟ್ರಸ್ಟ್ ಇದ್ದರೂ ಭಾರತೀಯ ಪುರಾತತ್ವ ಇಲಾಖೆಯ ಉಸ್ತುವಾರಿಯಲ್ಲಿ ದೇವಾಲಯವಿದೆ. ಬಿಗಿ ಬಂದೋಬಸ್ತಿನಿಂದಾಗಿ ದೇವಾಲಯ ಸಂಕೀರ್ಣದೊಳಗೆ ಮೊಬೈಲ್, ಕ್ಯಾಮೆರಾ ಒಯ್ಯುವಂತಿಲ್ಲ. ಹಿಂದೂಯೇತರರಿಗೆ ಪ್ರವೇಶವಿಲ್ಲ. ಆದರೆ ದೇವಾಲಯವನ್ನು ಸ್ಪಷ್ಟವಾಗಿ ವೀಕ್ಷಿಸಲು ಅವರಿಗೆ ವೇದಿಕೆಯೊಂದು ಇಲ್ಲಿದೆ. ಬ್ರಿಟಿಷ್ ಆಡಳಿತದ ವೇಳೆ ಆಗಿನ ವೈಸರಾಯ್ ಲಾರ್ಡ್ ಕರ್ಜನ್ ಬಂದಿದ್ದಾಗ ಅವರಿಗಾಗಿ ಇದನ್ನು ನಿರ್ಮಿಸಲಾಗಿತ್ತಂತೆ. ಅದನ್ನು ಉಳಿಸಿಕೊಳ್ಳಲಾಗಿದೆ.

‘ಭಾರತದ ಅಪ್ಪಟ ಹಿಂದೂ ದೇವಾಲಯಕ್ಕೊಂದು ಇದು ಉತ್ತಮ ಉದಾಹರಣೆ’ ಎನ್ನುತ್ತಾನೆ ವಾಸ್ತುಶಿಲ್ಪ ಇತಿಹಾಸಕಾರ ಜೇಮ್ಸ್ ಫರ್ಗ್ಯೂಸನ್. ಭುವನೇಶ್ವರ, ಕೊನಾರ್ಕ್ ಮತ್ತು ಪುರಿ ಈ ಮೂರೂ ಒರಿಸ್ಸಾಕ್ಕೆ ಪ್ರವಾಸ ಹೊರಡುವವರಿಗೆ ಸುವರ್ಣ ತ್ರಿಕೋನ ಸ್ಥಳಗಳಂತಿವೆ. ಲಿಂಗರಾಜ ದೇವಾಲಯ ಸಂಕೀರ್ಣದಲ್ಲಿರುವ ಅನಂತ ವಾಸುದೇವ, ರಾಜರಾಣಿ, ಮುಕ್ತೇಶ್ವರ, ಕೇದಾರೇಶ್ವರ, ಸಿದ್ದೇಶ್ವರ ಮತ್ತು ಪರಸುರಾಮೇಶ್ವರ ಇವು ಇತರ ಪ್ರವಾಸಿ ಆಕರ್ಷಣೆಗಳು.